# DPUE

# KANNADA

# NOTES

DPUE

# <u>ಉರಿಲಿಂಗಪೆದ್ದಿಯ ವಚನಗಳು</u>

ಸಾರಾಂಶ :

ಮೊದಲನೆಯ ವಚನ : ಸಕಲ ಮತ್ತು ನಿಷ್ಕಲಗಳ ಪರಸ್ಪರ ಸಂಬಂಧ ಕುರಿತು ಹೇಳುತ್ತದೆ.

ಸಕಲ(ಸಾಕಾರ, ಶಿವಲಿಂಗ,ಗೋಚರ ಜಗತ್ತು ಎನ್ನುವ ಅರ್ಥಗಳಲ್ಲಿ) ಮತ್ತು ನಿಷ್ಕಲ( ನಿರಾಕಾರ, ಶಿವ, ಅಗೋಚರ ಜಗತ್ತು ಎನ್ನುವ ಅರ್ಥಗಳಲ್ಲಿ) ಗಳು ಪರಸ್ಪರ ಬೇರೆಯಲ್ಲ , ಪೂರಕ ಎಂಬುದನ್ನು ಉದಾಹರಣೆಗಳ ಮೂಲಕ ಉರಿಲಿಂಗಪೆದ್ದಿಯು ನಿರೂಪಿಸುತ್ತಾನೆ. ಸೂರ್ಯನಿಲ್ಲದೆ ಹಗಲಾಗಲು ಸಾಧ್ಯವಿಲ್ಲ, ದೀಪವಿಲ್ಲದೆ ಬೆಳಕುಂಟಾಗಲು ಸಾಧ್ಯವಿಲ್ಲ, ಪುಷ್ಪಗಳಿಲ್ಲದೆ ಪರಿಮಳ ಉಂಟಾಗಲು ಸಾಧ್ಯವಿಲ್ಲ, ಸಕಲವಿಲ್ಲದೆ ನಿಷ್ಕಲ ಕಾಣಲು ಸಾಧ್ಯವಿಲ್ಲ. ಅತಿಶ್ರೇಷ್ಠವಾದ ವಿಚಾರವು ಶಿವನಿಂದ ಮಾತ್ರ ತೋರಲು ಸಾಧ್ಯ ಎನ್ನುತ್ತಾನೆ.

ವಿಮರ್ಶೆ : ಶಿವ ಮತ್ತು ಶಿವರೂಪಿಯಾದ ಲಿಂಗ ಎರಡೂ ಕೂಡ ಮುಖ್ಯವಾದವುಗಳು. ಶಿವಲಿಂಗಕ್ಕೆ ಶಕ್ತಿ ತುಂಬುವವನು ಶಿವ. ಆದ್ದರಿಂದ ಅವೆರಡೂ ಪರಸ್ಪರ ಅಂತರ್ ಸಂಬಂಧಿಗಳು. ಕಾರ್ಯಕಾರಣ ಸಂಬಂಧ ಹೊಂದಿವೆ. ಸೂರ್ಯ ಹಗಲಿಗೆ ಕಾರಣ, ಬೆಳಕಿಗೆ ದೀಪ ಕಾರಣ, ಪರಿಮಳಕ್ಕೆ ಪುಷ್ಪಕಾರಣ ವಾದಂತೆ ಶಿವಲಿಂಗಕ್ಕೆ ಶಿವನೆ ಕಾರಣ ಎಂದು ಹೇಳಿದ್ದಾನೆ. ಅದರ ಶ್ರೇಷ್ಠತೆಯನ್ನು ಅರಿತು ಬಾಳಬೇಕೇನ್ನುತ್ತಾನೆ.

ಎರಡನೆಯ ವಚನ : ಇಷ್ಟಲಿಂಗದ ಮಹತ್ವವನ್ನು ಸಾರುತ್ತದೆ.

ಮುಟ್ಟಿದ್ದೆಲ್ಲಾ ಚಿನ್ನವಾಗಿಸುವ ಶಿಲೆಯಿಂದ ನಿರ್ಮಿಸಿರುವ ಮನೆಯಲ್ಲಿ ವಾಸವಾಗಿರುವ ವ್ಯಕ್ತಿ ಭಿಕ್ಷೆಗಾಗಿ ಅಲೆಯುವುದಿಲ್ಲ. ನೀರಿನ ತೊರೆಯಲ್ಲಿ ಇರುವವನು ಬಾಯಾರಿಕೆಯಾಯಿತೆಂದು ಕೆರೆಯನೀರನ್ನು ಹುಡುಕುವುದಿಲ್ಲ. ಪೂಣ್ಯಕರವಾದ ಲಿಂಗ (ಇಷ್ಟ ಲಿಂಗ) ವನ್ನು ತನ್ನ ದೇಹದಮೇಲೆ ಧರಿಸಿರುವವನು ಅನ್ಯಲಿಂಗಕ್ಕಾಗಿ ಹುಡುಕಾಡುವುದಿಲ್ಲ.

ವಿಮರ್ಶೆ : ವೀರಶೈವ ಧರ್ಮದಲ್ಲಿ ಭಕ್ತರು ತಮ್ಮ ದೇಹದ ಮೇಲೆ ಶಿವನ ಪ್ರತೀಕವಾಗಿ ಇಷ್ಟಲಿಂಗ ಧಾರಣೆಮಾಡುತ್ತಾರೆ. ಇಷ್ಟಲಿಂಗ ಧಾರಣೆ ಮಾಡಿರುವ ಭಕ್ತನು ತಾನು ಧರಿಸಿರುವ ಲಿಂಗದಲ್ಲಿಯೇ ನಿಷ್ಕಲಗುಣರೂಪಿಯಾದ ಶಿವನನ್ನು ಕಾಣುತ್ತಾನೆ ಎಂದು ಉರಿಲಿಂಗಪೆದ್ದಿ ಹೇಳುತ್ತಾನೆ.

ಮೂರನೆಯ ವಚನ : ಗುರು-ಲಘು ಇವರ ಲಕ್ಷಣಗಳನ್ನು ಕುರಿತು ಹೇಳಿದ್ದಾನೆ.

ಗುರುವಾದವನು ಗರುವಾಗಿಯೇ ಇರಬೇಕು, ಲಘುವಾದವನು ಲಘುವಾಗಿಯೇ ಇರಬೇಕು, ಒಂದು ವೇಳೆ ಗುರುವಾದವನು ಲಘುವಾಗಿ ವರ್ತಿಸಿದರೆ ( ಸಣ್ಣತನದಿಂದ ವರ್ತಿಸಿದರೆ ) ತನ್ನ ಗೌರವ, ಸ್ಥಾನಮಾನ ಕಳೆದುಕೊಳ್ಳುತ್ತಾನೆ. ಗುರು-ಲಿಂಗ-ಜಂಗಮ ಇವು ಬಹಳ ಶೇಷ್ಠ ವಾದವುಗಳು. ಈ ತ್ರಿವಿಧವನ್ನು ಲಘುವಾಗಿ ಕಂಡವನು ತಾನೇ ಲಘುವಾಗುತ್ತಾನೆ.

ವಿಮರ್ಶೆ :: ವೀರಶೈವ ಧರ್ಮದಲ್ಲಿ ಗುರು-ಲಿಂಗ-ಜಂಗಮ (ಶಿಕ್ಷಕ-ದೇವರು-ಭಕ್ತ) ಈ ಮೂರು ತತ್ವಗಳಿಗೆ ತುಂಬಾ ಮಹತ್ವದ ಸ್ಥಾನವಿದೆ. ಇವು ತ್ರಿಧಗಳು ಎಂದು ಪ್ರಸಿದ್ಧಿ ಪಡೆದಿವೆ. ಇವುಗಳನ್ನು ಯಾರೂ ಲಘುವಾಗಿ ತಿಳಿಯಬಾರದು.

ಒಂದು ವಾಕ್ಯದಲ್ಲಿ ಉತ್ತರಿಸಿ.

1. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು?

   ಉತ್ತರ : ಉರಿಲಿಂಗಪೆದ್ದಿಯ ವಚನಗಳ ಅಂಕಿತ 'ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ'
2. ಯಾವುದರಿಂದ ಪರಿಮಳವನ್ನು ಅರಿಯಬಹುದು ?

   ಉತ್ತರ : ಪುಷ್ಪರಿಂದ ಪರಿಮಳವನ್ನು ಅರಿಯಬಹುದು.
3. ಯಾರು ಅನ್ಯಲಿಂಗವನ್ನು ನೆನೆಯುವುದಿಲ್ಲ?

DRAFT

ಮಂಗಳಲಿಂಗವನ್ನು ಅಂಗದ ಮೇಲೆ ಧರಿಸಿರುವವನು ಅನ್ಯಲಿಂಗವನ್ನು ನೆನೆಯುವುದಿಲ್ಲ.

4. ಗುರು ಹೇಗೆ ವರ್ತಿಸಬಾರದು ?

ಗುರು ಲಘುವಾಗಿ ವರ್ತಿಸಬಾರದು .

ಎರಡು ಅಂಕದ ಪ್ರಶ್ನೆಗಳು

1. ಸೂರ್ಯ ಮತ್ತು ಬೆಳಕಿನಿಂದಾಗುವ ಪ್ರಯೋಜನಗಳಾವವು?
   ಉತ್ತರ : ಸೂರ್ಯನಿಂದ ಹಗಲು ಉಂಟಾಗುತ್ತದೆ. ದೀಪದಿಂದ ಬೆಳಕು ಉಂಟಾಗುತ್ತದೆ. ಇವು ಸೂರ್ಯ ಮತ್ತು ಬೆಳಕಿನ ಪ್ರಯೋಜನಗಳಾಗಿವೆ.

2. ಯಾರು ಮನೆಮನೆಉನ್ನು ತಿರಿಯನು? ಕೆರೆಯುದಕನ್ನರಸದವನು ಯಾರು?
   ಉತ್ತರ : ಮುಟ್ಟಿದ್ದೆಲ್ಲಾ ಚಿನ್ನವಾಗಿಸುವ ಶಿಲೆಯಿಂದ ನಿರ್ಮಿಸಿರುವ ಮನೆಯಲ್ಲಿ ವಾಸವಾಗಿರುವ ವ್ಯಕ್ತಿ ಭಿಕ್ಷೆಗಾಗಿ ಅಲೆಯುವುದಿಲ್ಲ. ನೀರಿನ ತೊರೆಯಲ್ಲಿ ಇರುವವನು ಬಾಯಾರಿಕೆಯಾಯಿತೆಂದು ಕೆರೆಯನೀರನ್ನು ಹುಡುಕುವುದಿಲ್ಲ.

3. ಗುರುವಿನ ಲಕ್ಷಣಗಳಾವವು ?
   ಗುರುವಾದವನು ಗರುವಾಗಿಯೇ ಇರಬೇಕು, ಲಘುವಾದವನು ಲಘುವಾಗಿಯೇ ಇರಬೇಕು, ಒಂದು ವೇಳೆ ಗುರುವಾದವನು ಲಘುವಾಗಿ ವರ್ತಿಸಿದರೆ ( ಸಣ್ಣತನದಿಂದ ವರ್ತಿಸಿದರೆ ) ತನ್ನ ಗೌರವ, ಸ್ಥಾನಮಾನ, ಮರ್ಯಾದೆ ಕಳೆದುಕೊಳ್ಳುತ್ತಾನೆ.

ಐದು/ಆರು ವಾಕ್ಯಗಳಲ್ಲಿ ಉತ್ತರಿಸಿ.

1. ಮಂಗಳಲಿಂಗದ ಮಹತ್ವವನ್ನು ಹೇಗೆ ವಿವರಿಸಲಾಗಿದೆ ?

ಉತ್ತರ : ವೀರಶೈವ ಧರ್ಮದಲ್ಲಿ ಭಕ್ತರು ತಮ್ಮ ದೇಹದಲ್ಲಿ ಶಿವನ ಪ್ರತೀಕವಾಗಿ ಇಷ್ಟಲಿಂಗ ಧಾರಣೆಮಾಡುತ್ತಾರೆ. ಇಷ್ಟಲಿಂಗ ಧಾರಣೆ ಮಾಡಿರುವ ಭಕ್ತನು ತಾನು ಧರಿಸಿರುವ ಲಿಂಗದಲ್ಲಿಯೇ ನಿಷ್ಕಲಗುಣರೂಪಿಯಾದ ಶಿವನನ್ನು ಕಾಣುತ್ತಾನೆ ಎಂದು ಉರಿಲಿಂಗಪೆದ್ದಿ ಹೇಳುತ್ತಾನೆ. ಮುಟ್ಟಿದ್ದೆಲ್ಲಾ ಚಿನ್ನವಾಗಿಸುವ ಶಿಲೆಯಿಂದ ನಿರ್ಮಿಸಿರುವ ಮನೆಯಲ್ಲಿ ವಾಸವಾಗಿರುವ ವ್ಯಕ್ತಿ ಭಿಕ್ಷೆಗಾಗಿ ಅಲೆಯುವುದಿಲ್ಲವೋ, ನೀರಿನ ತೊರೆಯಲ್ಲಿ ಇರುವವನು ಬಾಯಾರಿಕೆಯಾಯಿತೆಂದು ಕೆರೆಯನೀರನ್ನು ಹುಡುಕುವುದಿಲ್ಲವೋ ಹಾಗೆಯೇ ಪೂಣ್ಯಕರವಾದ ಲಿಂಗ (ಇಷ್ಟ ಲಿಂಗ) ವನ್ನು ತನ್ನ ದೇಹದಮೇಲೆ ಧರಿಸಿರುವವನು ಅನ್ಯಲಿಂಗಕ್ಕಾಗಿ ಹುಡುಕಾಡುವುದಿಲ್ಲ. ಆ ಇಷ್ಟಲಿಂಗದಲ್ಲಿಯೇ ಶಿವನ ಸವಸ್ವರೂಪವನ್ನು ಕಂಡು ಸದಾಚಾರಿಯಾಗಿ ಬದುಕುತ್ತಾನೆನ್ನುವುದು ಉರಿಲಿಂಗಪೆದ್ದಿಯ ಅಭಿಪ್ರಾಯವಾಗಿದೆ.

2. ಗುರುಲಘುವರ್ತನದಲ್ಲಿ ವರ್ತಿಸಬಾರದೇಕೆ ?

ಉತ್ತರ : ಗುರುವಾದವನು ಗರುವಾಗಿಯೇ ಇರಬೇಕು, ಲಘುವಾದವನು ಲಘುವಾಗಿಯೇ ಇರಬೇಕು, ಒಂದು ವೇಳೆ ಗುರುವಾದವನು ಲಘುವಾಗಿ ವರ್ತಿಸಿದರೆ ( ಸಣ್ಣತನದಿಂದ ವರ್ತಿಸಿದರೆ ) ತನ್ನ ಗೌರವ, ಸ್ಥಾನಮಾನ ಕಳೆದುಕೊಳ್ಳುತ್ತಾನೆ. ವೀರಶೈವ ಧರ್ಮದಲ್ಲಿ ಗುರು–ಲಿಂಗ–ಜಂಗಮ (ಶಿಕ್ಷಕ–ದೇವರು–ಭಕ್ತ) ಈ ಮೂರು ತತ್ವಗಳಿಗೆ ತುಂಬಾ ಮಹತ್ವದ ಸ್ಥಾನವಿದೆ. ಇವು ತ್ರಿಧಗಳು ಎಂದು ಪ್ರಸಿದ್ಧಿ ಪಡೆದಿವೆ. ಇವುಗಳನ್ನು ಯಾರೂ ಲಘುವಾಗಿ ತಿಳಿಯಬಾರದು. ಗುರುವಾದವನ ಸ್ಥಾನ ಎಲ್ಲಕ್ಕಿಂತಲೂ ಮಿಗಿಲಾದುದು. ಭಕ್ತಮತ್ತು ದೇವರ ಕೊಂಡಿಯಾಗಿ ಕೆಲಸಮಾಡುತ್ತಾನೆ. ಒಂದು ವೇಳೆ ಗುರುವಾದವನು ಲಘುವಾಗಿ ವರ್ತಿಸಿದರೆ ಸಂಪೂರ್ಣ ವ್ಯವಸ್ಥೆಯೆ ನಾಶವಾಗಿ ಹೋಗುತ್ತದೆ. ಸಮಾಜವನ್ನು ತಿದ್ದಿತೀಡಿ ಸರಿಪಡಿಸಬೇಕಾದ ಕಾರ್ಯದಲ್ಲಿ ಗುರುವಿನ ಸ್ಥಾನ ಮಹತ್ತರವಾದುದು ಆದ್ದರಿಂದ ಗುರು ಲಘುವಾಗಿ ವರ್ತಿಸಬಾರದು.

3. ಉರಿಲಿಂಗ ಪೆದ್ದಿಯ ವಚನಗಳಲ್ಲಿಯ ಆಶಯ ವೇನು ?

ಶಿವ ಮತ್ತು ಶಿವರೂಪಿಯಾದ ಲಿಂಗ ಎರಡೂ ಕೂಡ ಮುಖ್ಯವಾದವುಗಳು. ಶಿವಲಿಂಗಕ್ಕೆ ಶಕ್ತಿ ತುಂಬುವವನು ಶಿವ. ಆದ್ದರಿಂದ ಅವೆರಡೂ ಪರಸ್ಪರ ಅಂತರ್ ಸಂಬಂಧಿಗಳು. ಕಾರ್ಯಕಾರಣ ಸಂಬಂಧ ಹೊಂದಿವೆ. ಸೂರ್ಯ ಹಗಲಿಗೆ ಕಾರಣ, ಬೆಳಕಿಗೆ ದೀಪ ಕಾರಣ, ಪರಿಮಳಕ್ಕೆ ಪುಷ್ಪಕಾರಣ ವಾದಂತೆ ಶಿವಲಿಂಗಕ್ಕೆ ಶಿವನೆ ಕಾರಣ ಎಂದು ಹೇಳಿದ್ದಾನೆ. ವೀರಶೈವ ಧರ್ಮದಲ್ಲಿ ಭಕ್ತರು ತಮ್ಮ ದೇಹದ ಮೇಲೆ ಶಿವನ ಪ್ರತೀಕವಾಗಿ ಇಷ್ಟಲಿಂಗ ಧಾರಣೆಮಾಡುತ್ತಾರೆ. ಇಷ್ಟಲಿಂಗ ಧಾರಣೆ ಮಾಡಿರುವ ಭಕ್ತನು ತಾನು ಧರಿಸಿರುವ ಲಿಂಗದಲ್ಲಿಯೇ ನಿಷ್ಕಲಗುಣರೂಪಿಯಾದ ಶಿವನನ್ನು ಕಾಣುತ್ತಾನೆ ಎಂದು ಉರಿಲಿಂಗಪೆದ್ದಿ ಹೇಳುತ್ತಾನೆ. ಗುರು–ಲಿಂಗ–ಜಂಗಮ (ಶಿಕ್ಷಕ–ದೇವರು–ಭಕ್ತ) ಈ ಮೂರು ತತ್ವಗಳಿಗೆ ತುಂಬಾ ಮಹತ್ವದ ಸ್ಥಾನವನ್ನು ನೀಡಿದ್ದಾನೆ. ಇವು ತ್ರಿಧಗಳು ಎಂದು ಪ್ರಸಿದ್ಧಿ ಪಡೆದಿವೆ. ಇವುಗಳನ್ನು ಯಾರೂ ಲಘುವಾಗಿ ತಿಳಿಯಬಾರದು. ಘುರುವಾದವನು ಎಂದೂ ಲಘುವಾಗಿ ವರ್ತಿಸಬಾರದೆನ್ನುತ್ತಾನೆ.

ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ.

1. ಪುಷ್ಪವಿಲ್ಲದೆ ಪರಿಮಳವನರಿಯಬಹುದೆ.

ಉತ್ತರ :

ಆಯ್ಕೆ : ಪದ್ಯಭಾಗ : ವಚನಗಳು

ವಚನಕಾರ : ಉರಿಲಿಂಗಪೆದ್ದಿಯ ವಚನಗಳು
ಆಕರ ಗ್ರಂಥ : ಶಿವಶರಣರ ಸಮಗ್ರ ವಚನ ಸಂಪುಟ.

ಈ ಮೇಲಿನ ಮಾತನ್ನು ಉರಿಲಿಂಗ ಪೆದ್ದಿ ಹೇಳಿದ್ದಾನೆ.

ಸಂದರ್ಭ : ಮಹಾ ಘನವಾದ ಶಿವನಿಂದಲೇ ಶಿವಲಿಂಗಕ್ಕೆ ಚೈತನ್ಯ ವಿದೆ ಎಂಬುದನ್ನು ದೃಷ್ಟಾಂತಗಳ ಮೂಲಕ ನಿರೂಪಿಸುವಾಗ ಉರಿಲಿಂಗ ಪೆದ್ದಿ ಈ ರೀತಿ ಹೇಳಿದ್ದಾನೆ.

ಸ್ವಾರಸ್ಯ : ಶಿವ ಮತ್ತು ಶಿವಲಿಂಗ ಪರಸ್ಪರ ಅಭಿನ್ನವಾದವುಗಳು, ಕಾರ್ಯ ಕಾರಣ ಸಂಬಂಧಗಳನ್ನು ಹೊಂದಿವೆ. ಈ ತತ್ವವನ್ನು ಪರಿಮಳಕ್ಕೆ ಪುಷ್ಪವು ಕಾರಣವಾದಂತೆ ಸಕಲ(ಶಿವಲಿಂಗ) ಕ್ಕೆ ನಿಷ್ಕಲ(ಶಿವ) ವೇ ಕಾರಣ ಎಂದು ದೃಷ್ಟಾಂತೀಕರಿಸಿದ್ದಾನೆ.

2. ಅನ್ಯ ಲಿಂಗಗಳ ನೆನೆವನೆ ನಿಮ್ಮ ಭಕ್ತನು.

ಉತ್ತರ :

ಆಯ್ಕೆ : ಪದ್ಯಭಾಗ : ವಚನಗಳು

ವಚನಕಾರ : ಉರಿಲಿಂಗಪೆದ್ದಿಯ ವಚನಗಳು

ಆಕರ ಗ್ರಂಥ : ಶಿವಶರಣರ ಸಮಗ್ರ ವಚನ ಸಂಪುಟ.

ಈ ಮೇಲಿನ ಮಾತನ್ನು ಉರಿಲಿಂಗ ಪೆದ್ದಿ ಹೇಳಿದ್ದಾನೆ.

DPUE

ಸಂದರ್ಭ : ಉರಿಲಿಂಗಪೆದ್ದಿಯು ವೀರಶೈವರು ತಮ್ಮ ದೇಹದ ಮೇಲೆ ಧರಿಸುವ ಇಷ್ಟ ಲಿಂಗದ ಮಹತ್ವವನ್ನು ವಿವರಿಸುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ವೀರಶೈವ ಧರ್ಮದಲ್ಲಿ ಭಕ್ತರು ತಮ್ಮ ದೇಹದಲ್ಲಿ ಶಿವನ ಪ್ರತೀಕವಾಗಿ ಇಷ್ಟಲಿಂಗ ಧಾರಣೆಮಾಡುತ್ತಾರೆ. ಪೂಣ್ಯಕರವಾದ ಲಿಂಗ (ಇಷ್ಟ ಲಿಂಗ) ವನ್ನು ತನ್ನ ದೇಹದಮೇಲೆ ಧರಿಸಿರುವವನು ಅನ್ಯಲಿಂಗಕ್ಕಾಗಿ ಹುಡುಕಾಡುವುದಿಲ್ಲ. ಆ ಇಷ್ಟಲಿಂಗದಲ್ಲಿಯೇ ಶಿವನ ಸವಸ್ವರೂಪವನ್ನು ಕಂಡು ಸದಾಚಾರಿಯಾಗಿ ಬದುಕುತ್ತಾನೆನ್ನುವುದು ಉರಿಲಿಂಗಪೆದ್ದಿಯ ಅಭಿಪ್ರಾಯವಾಗಿದೆ.

3. ತಾನೆ ಲಘುಮಾಡಿ ಲಘುವಾದನಯ್ಯ

ಉತ್ತರ :

ಆಯ್ಕೆ : ಪದ್ಯಭಾಗ : ವಚನಗಳು

ವಚನಕಾರ : ಉರಿಲಿಂಗಪೆದ್ದಿ

ವಚನಗಾರ : ಉರಿಲಿಂಗಪೆದ್ದಿಯ ವಚನಗಳು

ಆಕರ ಗ್ರಂಥ : ಶಿವಶರಣರ ಸಮಗ್ರ ವಚನ ಸಂಪುಟ.

ಈ ಮೇಲಿನ ಮಾತನ್ನು ಉರಿಲಿಂಗ ಪೆದ್ದಿ ಹೇಳಿದ್ದಾನೆ.

ಸಂದರ್ಭ : ಉರಿಲಿಂಗ ಪೆದ್ದಿಯು ಗುರುವಿನ ಲಕ್ಷಣಗಳನ್ನು ಹೇಳುವಾಗ ಗುರು–ಲಿಂಗ–ಜಂಗಮ (ತ್ರಿವಿಧ)ಗಳ ವಿಚಾರವಾಗಿ ಪ್ರಸ್ತಾಪಿಸುತ್ತಾನ ಆಸಂದರ್ಭದಲ್ಲಿ ಬರುವ ಮಾತಾಗಿದೆ.

ಸ್ವಾರಸ್ಯ: ವೀರಶೈವ ಧರ್ಮದಲ್ಲಿ ಗುರು–ಲಿಂಗ–ಜಂಗಮ (ಶಿಕ್ಷಕ–ದೇವರು–ಭಕ್ತ) ಈ ಮೂರು ತತ್ವಗಳಿಗೆ ತುಂಬಾ ಮಹತ್ವದ ಸ್ಥಾನವಿದೆ. ಇವು ತ್ರಿಧಗಳು ಎಂದು ಪ್ರಸಿದ್ಧಿ ಪಡೆದಿವೆ. ಇವುಗಳನ್ನು ಯಾರೂ ಲಘುವಾಗಿ ತಿಳಿಯಬಾರದು. ಯಾರು ಲಘುವಾಗಿ ಭಾವಿಸುತ್ತಾರೋ ಅವರೇ ಲಘುವಾಗುತ್ತಾರೆ ಎನ್ನುವುದು ಉರಿಲಿಂಗ ಪೆದ್ದಿಯ ಅಭಿಪ್ರಾಯವಾಗಿದೆ.

## ಭಾಷಾಭ್ಯಾಸ

ನಾನಾರ್ಥ ಪದಗಳು :

ತೊರೆ : ಒಂದು ಅರ್ಥದಲ್ಲಿ : ಹರಿವ ನೀರು
ಇನ್ನೊಂದು ಅರ್ಥದಲ್ಲಿ : ಬಿಡು/ತ್ಯಜಿಸು

2 ನೆನೆ : ಒಂದು ಅರ್ಥದಲ್ಲಿ : ಸ್ಮರಿಸು
ಇನ್ನೊಂದು ಅರ್ಥದಲ್ಲಿ : ಒದ್ದೆಯಾಗು

3 ಲಘು : ಒಂದು ಅರ್ಥದಲ್ಲಿ : ಚಿಕ್ಕದು
ಇನ್ನೊಂದು ಅರ್ಥದಲ್ಲಿ : ಹಗುರ

4 ಗುರು : ಒಂದು ಅರ್ಥದಲ್ಲಿ : ಹಿರಿದು
ಇನ್ನೊಂದು ಅರ್ಥದಲ್ಲಿ : ಶಿಕ್ಷಕ

ಸಮಾನಾರ್ಥಕ ಪದಗಳು :

ದೀಪ : ಜ್ಯೋತಿ, ಪ್ರಣತಿ, ಹಣತೆ

ಪುಷ್ಪ : ಹೂವು, ಕುಸುಮ, ಸುಮ.

ಗೃಹ : ಮನೆ , ಆಲಯ, ನಿವಾಸ

*************

DPUE